ಗೋಕಾಕ್ ತಾಲ್ಲೂಕಿನಲ್ಲಿ ಆಶ್ರಮ ಶಾಲೆ ಪ್ರಾರಂಭಿಸುವ ಬಗ್ಗೆ

೬೯೧ (ಇ). ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆಶ್ರಮ ಶಾಲೆಯನ್ನು ಗೋಕಾಕ್ ತಾಲ್ಲೂಕಿನಲ್ಲಿ ಮಂಜೂರಿ ಮಾಡದಿರಲು ಕಾರಣಗಳೇನು ?

ಆ) ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು) —

ಅ) ಆರ್ಥಿಕ ಮುಗ್ಗಟ್ಟಿನಿಂದ ಹಾಗೂ ೧೯೮೬-೮೭ನೇ ಸಾಲಿನ ಆಯವ್ಯಯದಲ್ಲಿ ಹಣ ಒದಗಿಸದ ಕಾರಣ ನೂತನ ಆಶ್ರಮ ಶಾಲೆಗಳನ್ನು ಮಂಜೂರು ಮಾಡಿರುವುದಿಲ್ಲ.

ಆ) ಆರ್ಥಿಕ ಪರಿಸ್ಥಿತಿಯನ್ನು ನೋಡಿ ಮುಂಜೂರಾತಿಯ ಬಗ್ಗೆ ಪರಿಶೀಲಿಸಲಾಗುವುದು.

ಗೋಕಾಕ್ ತಾಲ್ಲೂಕಿಗೆ ಅಂಗನವಾಡಿ ಯೋಜನೆಯನ್ನು ಆಳವಡಿಸುವ ಕುರಿತು.

೬೮೫. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಕಾಕ್ ತಾಲ್ಲೂಕಿಗೆ ಅಂಗನವಾಡಿ ಯೋಜನೆಯನ್ನು ವಿಸ್ತರಿಸುವ ಯೋಜನೆ ಸರಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಈ ಯೋಜನೆಯನ್ನು ಕಾರ್ಯಗತಗೊಳಿಸದಿರಲು ಕಾರಣವೇನು?

ಶ್ರೀ ಜಿ. ಬಸವಣ್ಣಪ್ಪ, (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಇದೆ.

ಆ) ರಾಜ್ಯದಲ್ಲಿ ಒಟ್ಟು ೯೪ ಅಂಗನವಾಡಿ ಕ್ಷೇತ್ರಗಳು ಕೆಲಸ ಮಾಡುತ್ತಿವೆ. ಉಳಿದ ತಾಲ್ಲೂಕುಗಳಲ್ಲಿ ಹಂತಹಂತವಾಗಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

ಸರಕಾರ ಮತ್ತು ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪತ್ತಿನ ಸಂಘಗಳಿಗೆ ನೀಡುವ ಬಡ್ಡಿ ಸಹಾಯ ಧನದ ವಿಳಂಬ ಹಾಗೂ ನಬಾರ್ಡ್‌ನಿಂದ ಎರಡು ಪಟ್ಟಿದ ಸಂಸ್ಥೆ ಮೂಲಕ ಸಾಲ ವಿತರಣೆ ಬಗ್ಗೆ.

೬೫೦. ಶ್ರೀ ಐ. ಬಿ. ಶಂಕರ್. (ಚಿಕ್ಕಮಗಳೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಾಥಮಿಕ ಸಹಕಾರ ಸಂಸ್ಥೆಗಳಿಂದ ಸಾಲ ಪಡೆದು ಸಕಾಲದಲ್ಲಿ ಸಾಲ ಮತ್ತು ಶೇ. ೭ ಬಡ್ಡಿಯನ್ನು ಪಾವತಿ ಮಾಡಿದ ರೈತರಿಗೆ ಉಳಿದ ಬಡ್ಡಿಯನ್ನು ಸಹಾಯಧನ ರೂಪದಲ್ಲಿ ಸರ್ಕಾರವು ಸಹಕಾರ ಸಂಘಗಳಿಗೆ ವಿಳಂಬವಾಗಿ ನೀಡುತ್ತಿರುವ ಕಾರಣದಿಂದಾಗಿ ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ನಷ್ಟ ಸಂಭವಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ನಷ್ಟವನ್ನು ತಪ್ಪಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದ್ದಾರೆ?

ಇ) ಪತ್ತಿನ ಸಹಕಾರ ಸಂಘಗಳಿಂದ ಪಡೆದ ಸಕಾಲದಲ್ಲಿ ಸಾಲ ಮತ್ತು ಶೇ. ೭ರ ಬಡ್ಡಿ ತಿರುಪಳಿ ಮಾಡಿದ ರೈತರಿಗೆ ಸಹಾಯಧನದ ರೂಪದಲ್ಲಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಶೇ. ಬಡ್ಡಿ ಸಹಾಯಧನವನ್ನು ಸಂಘಗಳಿಗೆ ಸರ್ಕಾರದ ಆಜ್ಞಾ ರೀತ್ಯ ನೀಡಬೇಕಾಗಿದ್ದಲ್ಲಿ ಇನ್ನೂ ಸಂಘಗಳಿಗೆ ಪಾವತಿಸದಿರಲು ಕಾರಣವೇನು?